ತಲೆನೋವಿನಿಂದ ಬಳಲಿದಾಗ, ರಾತ್ರಿಯ ಹೊತ್ತು ಸೈಕಲ್ಲಿನ ಮೇಲೆ ಸುಮಾರು ಹತ್ತು ಕಿ.ಮೀ. ದೂರದ ಪೇಟೆಗೆ ಹೋಗಿ ಸಾರಿಡಾನು ಮತ್ತಿತರ ಮಾತ್ರೆಗಳ ತಂದಾಗ ಅವಳ ಆ ಉತ್ಕಟ ಪ್ರೀತಿ ಸಾಕಷ್ಟು ಹೆದರಿಸಿ ಬಿಟ್ಟಿತ್ತು. ಈಗ ನೋಡಿದ್ರೆ ನಾನು ಮನೆಬಿಟ್ಟು ಹೋಗ್ತೀನಿ ಅಂತ ಹಟ!

ಅವಳ ಪಕ್ಕದಲ್ಲೇ ಕುಳಿತು, ಅವಳ ಭುಜಗಳ ಹಿಡಿದು 'ನಮಗ್ಯಾಕೆ ಪ್ರಶಾಂತಿ ಈ ಮರ್ಯಾದೆ, ಗೌರವ ಕಳೆಯುವ ತುಚ್ಛ ಕೆಲಸ? ಆರಾಮವಾಗಿರೋಣ' ಅಂದ. ಅವಳು ಅವನ ಗಲ್ಲ ಹಿಡಿದು ದೈನ್ಯತೆಯಿಂದ ನೋಡುತ್ತಾಳೆ.


'ಪ್ಲೀಸ್ ಮಣೀ. ನನ್ನನ್ನು ಹೋಗಲಿಕ್ಕೆ ಬಿಡು'. ಮರುಕ್ಷಣ ಅವಳನ್ನು ದೂರ ತಳ್ಳಿ, ಪಟಪಟನೆ ತಲೆಯನ್ನು ಕೈಯಿಂದ ಚಚ್ಚಿಕೊಂಡ ಮಣಿ.

ಬೆಳಗ್ಗೆ ಪ್ರಶಾಂತಿಯ ಹೆತ್ತವರಿಗೆ ಮಣಿ ಫೋನಾಯಿಸಿ ವಿಷಯ ತಿಳಿಸುತ್ತಿದ್ದರೆ, ಕೋಣೆಯಿಂದ ಆಚೆ ಬಂದು ನಿನಗೆ ಹೇಳಿ ಹೋಗೋಣಾಂತ ಎಂಬಂತೆ ನಿಂತಳು ಪ್ರಶಾಂತಿ. ಅವನಿಗೆ ತಲೆ ಕೆಟ್ಟುಹೋಯಿತು. ಫೋನ್ ಅನ್ನು ಜೋರಾಗಿ ಎಸೆಯುವ ಮುನ್ನ ಅವಳ ಹೆತ್ತವರ ಸಾಕಾಣಿಕೆಯನ್ನು ಒಂದು ಕೆಟ್ಟ ಶಬ್ದದಿಂದ ಬೈಯ್ದು, ಪ್ರಶಾಂತಿಯನ್ನು ದರದರನೆ ಎಳಕೊಂಡು ಹೋಗಿ ಮೈನ್ ಡೋರಿನಾಚೆ ತಳ್ಳಿ, ಅವಳ ಮೊಗದ ಮೇಲೇ ಬಾಗಿಲು ಜಡಿದು, ಹಿಂದಕ್ಕೆ ತಿರುಗಿದರೆ ಮೇಜಿನ ಮರೆಯಲ್ಲಿ ನಿಂತು ಭಯಭಯವಾಗಿ ನೋಡುತ್ತಿದ್ದ ಮಗ. ಅವನನ್ನು ಅಪ್ಪಿಕೊಂಡು ಅಳತೊಡಗಿದ ಮಣಿ.

* * *

ಪುಟ್ಟ ಮನೆ. ಬಾಲ್ಕನಿಯವರೆಗೆ ಬೆಳೆದು ನಿಂತ ಕಾಡುಮಲ್ಲಿಗೆ ಮರ. ನಾಲಕ್ಕು ಗೋಡೆಗಳ ನಡುವೆ ಯಾವುದೇ ಭಯವಿಲ್ಲದ ಏಕಾಂತ. ಅವಳು ಹೊಸಿಲು ದಾಟಿ ಒಳಗೆ ಹೆಜ್ಜೆ ಇಟ್ಟದ್ದೇ ಹಾಲಿನ ನಡುವೆ ನಿಂತು ಬಾಹುಗಳ ಚಾಚಿದ ಮಾಧವ. ಕಣ್ಣುದಿಗಳು ಒಡೆದುಹೋಗೋ ಥರದಲ್ಲಿ ಅವನನ್ನೇ ನೋಡುತ್ತಾ, ಎಲ್ಲವೂ, ಸಮಸ್ತವೂ ಮಾಯವಾಗಿ ತನ್ನ ಒಟ್ಟು ಪ್ರಪಂಚದಲ್ಲಿ ಇವನೊಬ್ಬನೇ.

ಮೂರು ದಿನಗಳಿಗೆ ಸಾಕಾಗುವಷ್ಟು ಷಾಪಿಂಗ್ ಮಾಡಿ ಬಂದು ಮನೆಯನ್ನು ಓರಣವಾಗಿಡಲು ಯತ್ನಿಸಿ, ಅಡುಗೆ ಮಾಡಿ ತಿಂದು ಒಬ್ಬರನ್ನೊಬ್ಬರು ಬಿಡದಂತೆ ಜೊತೆಜೊತೆಯಲ್ಲೇ ತಿರುಗಾಡುತ್ತಾ ಒಂದೇ ಸಮ ಹರಟೆ ಹರಟೆ. ಅವು ಯಾವುದಕ್ಕೂ ಅರ್ಥಪರ್ಥವಿರಲಿಲ್ಲ. ಕಿತ್ತೋದ ಮಾತುಗಳಿಗೂ ಈ ಪಾಟಿ ಆಕರ್ಷಣೆ ಇದ್ಯಾ ಅಂತ ತಮ್ಮಲ್ಲೇ ಅಚ್ಚರಿಗೊಳ್ತಾ, ಮೂರು ದಿನಗಳು ಮೂರು ಕ್ಷಣಗಳಂತೆ ಉರುಳಿಹೋದವಲ್ಲ! ನಾಲಕ್ಕನೆಯ ದಿನ ಹೆಂಡತಿಗೆ ಹೇಳಿಬರ್ತೀನಿ ಅಂತ ಹೋದ ಮಾಧವ ಆವತ್ತು ಬರಲೇ ಇರಲಿಲ್ಲ. ಮೆಟ್ಟಿಲ ಮೇಲೇ ಕುಳಿತು ತುಸು ದುಗುಡದಲ್ಲೇ ಅವನಿಗಾಗಿ ನಿರೀಕ್ಷಿಸಿದಳು ಪ್ರಶಾಂತಿ.



ಮೂರು ಸರ್ತಿ ಫೋನಾಯಿಸಿದರೂ ಅವನು ಕಟ್ ಮಾಡುತ್ತಲೇ ಇದ್ದ. ಅವನು ವಾಪಸ್ಸು ಬಂದಾಗ ಸಂಜೆ ನಾಲಕ್ಕೂವರೆ. ಬಂದದ್ದೇ ಅವಳನ್ನು ಬಿಗಿದಪ್ಪಿ 'ಹೇಳಿಬಿಟ್ಟೆ. ಅದಕ್ಕವಳು ನಾನು ನಿನ್ನ ಮೇಲೆ ಕೇಸು ಹಾಕಿದ್ರೆ ನಿನ್ನ ಕೆಲಸ ಹೋಗುತ್ತೆ. ಭಯ ಇಲ್ವಾ? ಅಂದಳು. ಸಂಬಳ ಪೂರ್ತಿ ನಿನಗೇ ಸಿಗೋ ಥರ ವ್ಯವಸ್ಥೆ ಮಾಡ್ತೀನಿ, ನಿಮಗೆ ಕಷ್ಟ ಬಂದರೆ ಸಹಾಯಕ್ಕೆ ನಾನು ಇರ್ತೀನಿ ಅಂದೆ. ಅಲ್ಲಿಗೆ ಮುಗಿದೋಯ್ತು. ಅಂತೂ... ನಾನವರಿಗೆ ತುಂಬಾನೇ ಅನ್ಯಾಯ ಮಾಡಿಬಿಟ್ಟೆ' ಅವನ ಧ್ವನಿಯಲ್ಲಿ ವಿಷಾದವಿತ್ತು.

ಆದರೆ, ಕಥೆ ಇನ್ನೂ ಮುಗಿದಿಲ್ಲ ಅಂತ ಇನ್ನೊಂದು ತಾಸು ಕಳೆದ ನಂತರ ತಿಳಿಯಿತು. ಮಾಧವನ ಹೆಂಡತಿ, ಇಬ್ಬರು ಹೆಣ್ಣುಮಕ್ಕಳು ಮತ್ತು ಕೆಲ ಬಂಧುಗಳ ಸಮೇತ ಬಂದಳು. ಪ್ರಶಾಂತಿಯನ್ನು ಹೊಡೆದಾದರೂ ತನ್ನ ಮಾಧವನನ್ನು ತನ್ನ ಜೊತೆಗೆ ಕರೆದುಕೊಂಡು ಹೋಗಲು. ಪ್ರಶಾಂತಿಯನ್ನು ಕೋಣೆಯೊಳಗೆ ತಳ್ಳಿ, ಕೋಣೆಗೆ ಬೀಗ ಹಾಕಿ, ಬೀಗದ ಕೈಯನ್ನು ಪ್ಯಾಂಟ್ ಜೇಬಿನಲ್ಲಿಳಿಸಿ, ಬಾಗಿಲಿಗೆ ಅಡ್ಡವಾಗಿ ನಿಂತುಬಿಟ್ಟ ಮಾಧವ. ಎಷ್ಟೇ ಗಲಾಟೆ ಆದರೂ ನಿಂತಲ್ಲಿಂದ ಕದಲಲಿಲ್ಲ. ಚಪ್ಪಲಿಯಿಂದ ಗಂಡನಿಗೆ ಪಟಪಟ ಬಾರಿಸಿದ್ದೇ ಬಾರಿಸಿದ್ದು ಹೆಂಡತಿ. ತುಂಬಾ ಮುದ್ದಿನಿಂದ ಸಾಕಿ ಬೆಳೆಸಿದ್ದ ಹೆಣ್ಣುಮಕ್ಕಳು ಕೂಡ ಅಪ್ಪನನ್ನು ಅಪ್ಪಿಕೊಂಡು 'ಅಪ್ಪಾ. ಭಯ ಆಗುತ್ತೆ ನಡಿ ಮನೆಗೆ ಹೋಗೋಣ'